# ಗದ್ದೆಯಾಗಿರುವ ಕಿತ್ತಗಾನಹಳ್ಳಿ ಹೆನ್ನಾಗರ ರಸ್ತೆ

ಪ್ರಜಾವಾಣಿ ವಾರ್ತೆ



ಮಳೆಯಿಂದಾಗಿ ಕೆಸರು ಗದ್ದೆಯಾಗಿರುವ ಕಿತ್ತಗಾನಹಳ್ಳಿ ರಸ್ತೆ

ರಸ್ತೆ ದುರವಸ್ಥೆ

**ಆನೇಕಲ್:** ಮಳೆ ಬಂದರೆ ಸಂಪೂರ್ಣ ಕೆಸರು ಗದ್ದೆಯಾಗುವ ತಾಲ್ಲೂಕಿನ ಕಿತ್ತಗಾನಹಳ್ಳಿ ರಸ್ತೆಯಲ್ಲಿ ಜನರು ಹಾಗೂ ವಾಹನ ಸವಾರರು ಸಂಚಾರ ಮಾಡಲು ಹರಸಾಹಸ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಷ್ಟ್ರೀಯ ಹೆದ್ದಾರಿ 7ರಲ್ಲಿ ನಾರಾಯಣ ಹೃದಯಾಲಯಕ್ಕೆ ಹೊಂದಿಕೊಂಡಂತಿರುವ ಕಿತ್ತಗಾನಹಳ್ಳಿ ರಸ್ತೆಯು ಹೆನ್ನಾಗರ, ಮಾಸ್ತೇನಹಳ್ಳಿ, ಎಚ್.ಹೊಸಹಳ್ಳಿ, ರಾಜಾಪುರ, ಶ್ರೀರಾಂಪುರ ಸೇರಿ ಹಲವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ. ಹಲವು ಶಾಲೆಗಳು, ಪ್ರತಿಷ್ಠಿತ ಆಸ್ಪತ್ರೆ, ಧಾರ್ಮಿಕ ಕ್ಷೇತ್ರವಾದ ಮಾಸ್ತೇನಹಳ್ಳಿ ವೀರಭದ್ರಸ್ವಾಮಿ ದೇವಾಲಯ, ರಾಜಾಪುರ ಸಂಸ್ಥಾನ ಮಠ, ಹೆನ್ನಾಗರ ಯಲ್ಲಮ್ಮದೇವಿ ದೇವಾಲಯಗಳು ಹಾಗೂ ಜಿಗಣಿ ಕೈಗಾರಿಕೆ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದೆ. ನಿತ್ಯ ಸಾವಿರಾರು ಮಂದಿ ಸಂಚರಿಸುವ ಈ ರಸ್ತೆ ಅಭಿವೃದ್ಧಿ ಕಾಣದೇ ಜನರು ಪರದಾಡುವಂತಾಗಿದೆ.

ಏತ ನೀರಾವರಿ ಯೋಜನೆಯಡಿ ಕೆರೆಗಳನ್ನು ತುಂಬಿಸಲು ಪೈಪ್‌ಲೈನ್ ಕಾಮಗಾರಿ ಪ್ರಾರಂಭಿಸಿದ್ದರಿಂದ ರಸ್ತೆ ಹದಗೆಟ್ಟಿದೆ. ಕಾಮಗಾರಿಗೆ ಎಚ್.ಹೊಸಹಳ್ಳಿ ಬಳಿ ತಡೆಯಾಜ್ಞೆ ತಂದಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು.

ಹಾಗಾಗಿ ಒಂದು ವರ್ಷ ಕಳೆದರೂ ರಸ್ತೆ ಅಭಿವೃದ್ಧಿಯ ಕಾಮಗಾರಿ ಪೂರ್ಣಗೊಂಡಿಲ್ಲ. ಪೈಪ್‌ಲೈನ್ ಕಾಮಗಾರಿಯೂ ಪೂರ್ಣಗೊಂಡಿಲ್ಲ. ಜನರು ಪರದಾಡುವುದು ತಪ್ಪಿಲ್ಲ.

ಮಳೆ ಬಂದರೆ ಸಾಕು ರಸ್ತೆಯಲ್ಲಿ ಸರ್ಕಸ್ ಮಾಡುತ್ತಾ ತಂತಿ ಮೇಲಿನ ನಡಿಗೆಯಂತೆ ಜನರು ಓಡಾಡಬೇಕಾಗಿದೆ. ಇತ್ತೀಚಿಗೆ ಸುರಿದ ಭಾರಿ ಮಳೆಯಿಂದಾಗಿ ದ್ವಿಚಕ್ರ ವಾಹನಗಳು ಆಯ ತಪ್ಪಿ ಅಪಘಾತ ಸಂಭವಿಸುತ್ತಿವೆ. ಆದರೆ ಸಂಬಂಧಿಸಿದವರು ಈ ಬಗ್ಗೆ ಕಾಳಜಿ ತೋರುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ 7ರಿಂದ ಒಂದೂವರೆ ಕಿ.ಮೀ. ದೂರದ ಕಿತ್ತಗಾನಹಳ್ಳಿ ರಸ್ತೆಯ ದುಸ್ಥಿತಿ ಇದು.

ದುಸ್ಥಿತಿಯಲ್ಲಿರುವ ಕಿತ್ತಗಾನಹಳ್ಳಿ-ಹೆನ್ನಾಗರ ರಸ್ತೆಯನ್ನು ತ್ವರಿತವಾಗಿ ಅಭಿವೃದ್ಧಿ ಪಡಿಸಿ ಸಾರ್ವಜನಿಕರು ನಿರಾಳವಾಗಿ ಸಂಚರಿಸಲು ಅನುಕೂಲ ಮಾಡಿಕೊಡಬೇಕು ಎಂಬುದು ಸ್ಥಳೀಯರ ಒತ್ತಾಸೆ.

## ಕಾಮಗಾರಿ ಪೂರ್ಣಗೊಳಿಸಲು ಮನವಿ



ರೈತರು, ವಿದ್ಯಾರ್ಥಿಗಳು ಹೆನ್ನಾಗರ ರಸ್ತೆಯಲ್ಲಿ ಪ್ರಯಾಣಿಸಬೇಕಾದರೆ ಹರಸಾಹಸ ಪಡಬೇಕು. ಬೆಂಗಳೂರಿಗೆ ಸಮೀಪವಿದ್ದರೂ ಹೆನ್ನಾಗರ-ಕಿತ್ತಗಾನಹಳ್ಳಿ ರಸ್ತೆ ಅವಸ್ಥೆ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ. ಇದರಿಂದಾಗಿ ರಸ್ತೆ ಬಿಟ್ಟು ಪರ್ಯಾಯ ಮಾರ್ಗಗಳಲ್ಲಿ ಓಡಾಡುವಂತಾಗಿದೆ. ಸಂಬಂಧಿಸಿದವರು ಕೂಡಲೇ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಿ ರಸ್ತೆ ಅಭಿವೃದ್ಧಿ ಪಡಿಸಬೇಕು.

**ಎಂ.ಬಾಬುರೆಡ್ಡಿ** ಹೆನ್ನಾಗರ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷ



ರಸ್ತೆ ಹಾಳಾಗಿರುವುದರಿಂದ ಗ್ರಾಮದಲ್ಲಿನ ಬಾಡಿಗೆ ಮನೆಗಳಿಗೆ ಬಾಡಿಗೆದಾರರೇ ಬರದಂತಾಗಿದೆ. ಆರೋಗ್ಯ ಪರಿಸ್ಥಿತಿ ಹದಗೆಟ್ಟ ಸಂದರ್ಭದಲ್ಲಿ ಪಕ್ಕದಲ್ಲಿಯೇ ಆಸ್ಪತ್ರೆ ಇದ್ದರೂ ಆಂಬ್ಯುಲೆನ್ಸ್ ಬರುವುದು ಕಷ್ಟವಾಗಿದೆ.

**ವಿ.ಹರೀಶ್** ಸ್ಥಳೀಯ ನಿವಾಸಿ



ಕಾಂಗ್ರೆಸ್ ಶಾಸಕ ಡಿ.ಕೆ.ಶಿವಕುಮಾರ್ ಅವರ ಪತ್ನಿ ಉಷಾ, ಮಗಳು ಐಶ್ವರ್ಯಾ ಅವರು ಶುಕ್ರವಾರ ಹಾಸನಾಂಬೆ ದೇವಿಗೆ ಪೂಜೆ ಸಲ್ಲಿಸಿದರು

# ಇಂದು ಡಿಕೆಶಿ ಸ್ವಾಗತಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

**ದೊಡ್ಡಬಳ್ಳಾಪುರ:** ತಿಹಾರ್ ಜೈಲಿನಿಂದ ಜಾಮೀನು ಮೇಲೆ ಬಿಡುಗಡೆಯಾಗಿರುವ ಶಾಸಕ ಡಿ.ಕೆ.ಶಿವಕುಮಾರ್ ಅವರು ಅ 26 ರಂದು ದೇವನಹಳ್ಳಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರಲಿದ್ದಾರೆ ಎಂದು ಬಮೂಲ್ ನಿರ್ದೇಶಕ ಹಾಗೂ ಕೆಎಂಎಫ್ ನಿರ್ದೇಶಕ ಬಿ.ಸಿ. ಆನಂದ್‌ಕುಮಾರ್ ತಿಳಿಸಿದ್ದಾರೆ.

ಅವರು ಈ ಬಗ್ಗೆ ಮಾಹಿತಿ ನೀಡಿ, ಗುರುವಾರ ದೆಹಲಿಯಲ್ಲಿ ಶಿವಕುಮಾರ್ ಅವರನ್ನು ಭೇಟಿ ಮಾಡಿ ಅವರ ಯೋಗಕ್ಷೇಮ ವಿಚಾರಿಸಲಾಯಿತು. ಶಿವಕುಮಾರ್ ಅವರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢರಾಗಿದ್ದಾರೆ. ಕರ್ನಾಟಕದಿಂದ ಬಂದಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಅಭಿಮಾನಿಗಳೊಂದಿಗೆ ಸುಮಾರು ಎರಡು ಗಂಟೆಗಳಿಗೂ ಹೆಚ್ಚಿನ ಸಮಯ ಮಾತನಾಡಿದರು.



ಡಿಕೆಶಿ ಅವರೊಂದಿಗೆ ಕೆಎಂಎಫ್ ನಿರ್ದೇಶಕ ಬಿ.ಸಿ.ಆನಂದ್‌ಕುಮಾರ್

ಅ 26ರಂದು ದೊಡ್ಡಬಳ್ಳಾಪುರ ತಾಲ್ಲೂಕಿನಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಶಿವಕುಮಾರ್ ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಬರಲಿದ್ದಾರೆ ಎಂದರು.



ಮಾಗಡಿ ತಾಲ್ಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಶೈಲಜಾ ಅವರನ್ನು ಧನಲಕ್ಷ್ಮೀ ತಂಡದವರು ಸನ್ಮಾನಿಸಿದರು

# ಮಹಿಳಾ ಘಟಕದ ಅಧ್ಯಕ್ಷೆಯಾಗಿ ಶೈಲಜಾ ನೇಮಕ: ಅಭಿನಂದನೆ

ಪ್ರಜಾವಾಣಿ ವಾರ್ತೆ

**ಮಾಗಡಿ:** ಜೆಡಿಎಸ್ ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷರಾಗಿ ಕಾಳಾರಿಕಾವಲ್ ವರದೋಹಳ್ಳಿ ಮೂಲದ ಶೈಲಜಾ ಅವರು ನೇಮಕವಾಗಿದ್ದಾರೆ. ನೂತನ ಅಧ್ಯಕ್ಷರನ್ನು ರಾಜೀವಗಾಂಧಿ ನಗರದ ಮಹಿಳಾಪರ ಮುಖಂಡರಾದ ಧನಲಕ್ಷ್ಮೀ ತಂಡದವರು ಅಭಿನಂದಿಸಿದರು.

‘ಗ್ರಾಮೀಣ ಭಾಗದ ಮಹಿಳೆಯರನ್ನು ಸಂಘಟಿಸಿ, ಅವರಲ್ಲಿ ರಾಜಕೀಯ ಅರಿವು ಮೂಡಿಸಲಾಗುವುದು. ದಮನಿತ ಮಹಿಳೆಯರ ಪರವಾಗಿ ಧ್ವನಿ ಎತ್ತಿ ಸಾಮಾಜಿಕ ನ್ಯಾಯ ದೊರಕಿಸಿಕೊಡಲಾಗುವುದು’ ಎಂದು ನೂತನ ಅಧ್ಯಕ್ಷೆ ಶೈಲಜಾ ತಿಳಿಸಿದರು.

ರಾಜೀವಗಾಂಧಿ ನಗರದ ಆರ್. ಧನಲಕ್ಷ್ಮೀ, ಅಮುಧ, ಮಹಾದೇವಿ, ವಾಣಿ ಚಿನ್ನಪಾಪ, ಕವಿತ, ಮಾರಿಯಮ್ಮ, ರಾಧ, ಶೀಲ, ನಳಿನಿ, ಮೇರಿ, ಪ್ರೇಮ, ಗೀತಾ, ಸಂಗೀತಾ, ಕುಮಾರಿ, ಶಾರದಮ್ಮ ಮಹಿಳೆಯರ ಸಮಸ್ಯೆ ಕುರಿತು ಮಾತನಾಡಿದರು.

ಮುಖಂಡರಾದ ಹೇಮಲತಾ ನಾಗರಾಜು, ಮಾರಿಯಮ್ಮ, ರಂಗನಾಯಕಿ, ಭಾಗ್ಯಮ್ಮ, ರಾಜಮ್ಮ, ಧನಲಕ್ಷ್ಮೀ.ಪಿ, ಅಮ್ಮು ಮುಂತಾದವರು ಇದ್ದರು.

# ಆಭರಣ ಕದ್ದು, ಪತ್ನಿಯರಿಂದ ಮಾರಿಸುತ್ತಿದ್ದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಮನೆಗಳಲ್ಲಿ ಕಳವು ಮಾಡುತ್ತಿದ್ದ ಆರೋಪದಡಿ ರಾಜ ಅಲಿಯಾಸ್ ಜಪಾನ್ ರಾಜ ಹಾಗೂ ಆತನ ಐವರು ಸಹಚರರನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

’ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ ರಾಜ, ಇದುವರೆಗೂ 50 ಮನೆಗಳಲ್ಲಿ ಕಳವು ಮಾಡಿದ್ದಾನೆ. ಈ ಹಿಂದೆ ನಗರದ ಪೊಲೀಸರು, ಆರೋಪಿಯನ್ನು ಬಂಧಿಸಿ ಜೈಲಿಗಟ್ಟಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಆರೋಪಿ, ಗ್ಯಾಂಗ್ ಕಟ್ಟಿಕೊಂಡು ಕೃತ್ಯ ಎಸಗಲಾರಂಭಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿಗೆ ಇಬ್ಬರು ಪತ್ನಿಯರಿದ್ದಾರೆ. ಕದ್ದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ಪತ್ನಿಯರ ಮೂಲಕವೇ ಮಾರಾಟ ಮಾಡಿಸುತ್ತಿದ್ದ. ಈತನಿಂದ ₹20 ಲಕ್ಷ ಮೌಲ್ಯದ 501 ಗ್ರಾಂ ಚಿನ್ನಾಭರಣ ಹಾಗೂ 4 ಕೆ.ಜಿ 519 ಗ್ರಾಂ ಬೆಳ್ಳಿ ಆಭರಣ ಜಪ್ತಿ ಮಾಡಲಾಗಿದೆ’ ಎಂದರು.

**ಬಾಡಿಗೆ ಮನೆ ಮಾಡಿ ಕೃತ್ಯ:** ‘ಗ್ಯಾಂಗ್‌ನಲ್ಲಿದ್ದ ಗೋಪಿ, ಡೇವಿಡ್ ಅಲಿಯಾಸ್ ಫ್ರಾನ್ಸಿಸ್, ಅರ್ಜುನ್ ಅಲಿಯಾಸ್ ಕಾರ್ತಿಕ್, ಶಿವಾನಂದ್ ಹಾಗೂ ಸೋಮನನ್ನು ಸೆರೆ ಹಿಡಿಯಲಾಗಿದೆ. ನಗರದಲ್ಲಿ ಓಡಾಡುತ್ತಿದ್ದ ಅವರೆಲ್ಲ ಯಾವ ಮನೆಯಲ್ಲಿ ಕಳ್ಳತನ ಮಾಡಬೇಕು ಎಂಬುದನ್ನು ಗುರುತಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಕಳ್ಳತನ ಮಾಡುವ ಮನೆ ಸಮೀಪದಲ್ಲೇ ಆರೋಪಿಗಳು, ಬಾಡಿಗೆ ಮನೆ ಮಾಡಿ ವಾಸವಿರುತ್ತಿದ್ದರು. ರಾತ್ರಿ ಹೊತ್ತಿನಲ್ಲಿ ಕಳವು ಮಾಡಿಕೊಂಡು ಬಾಡಿಗೆ ಮನೆಯನ್ನೂ ಖಾಲಿ ಮಾಡಿ ಪರಾರಿಯಾಗುತ್ತಿದ್ದರು. ತಲಘಟ್ಟಪುರ ಠಾಣೆ ವ್ಯಾಪ್ತಿಯ 11 ಮನೆಗಳಲ್ಲಿ ಆರೋಪಿಗಳು ಕೃತ್ಯ ಎಸಗಿದ್ದು ತನಿಖೆಯಿಂದ ತಿಳಿದುಬಂದಿದೆ’ ಎಂದು ತಿಳಿಸಿದರು.

# ನಡುರಸ್ತೆಯಲ್ಲೇ ರೌಡಿ ಹತ್ಯೆ

**ಬೆಂಗಳೂರು:** ಮಾರತ್ತಹಳ್ಳಿ ಠಾಣೆಯ ರೌಡಿಶೀಟರ್ ಮಂಜುನಾಥ್ ಅಲಿಯಾಸ್ ಮಂಜನನ್ನು (28) ದುಷ್ಕರ್ಮಿಗಳು ನಡುರಸ್ತೆಯಲ್ಲೇ ಅಟ್ಟಾಡಿಸಿಕೊಂಡು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿದ್ದಾರೆ.

ಕೊಲೆ ಸಂಬಂಧ ಮಹದೇವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಳೇ ವೈಷಮ್ಯದಿಂದಾಗಿ ಕೊಲೆ ನಡೆದಿರಬಹುದೆಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

‘ಹಲವು ಅಪರಾಧ ಕೃತ್ಯಗಳಲ್ಲಿ ಮಂಜ ಭಾಗಿಯಾಗಿದ್ದ. ಆತನ ಎದುರಾಳಿ ತಂಡದವರೇ ಕೃತ್ಯ ಎಸಗಿರುವ ಮಾಹಿತಿ ಇದೆ. ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

**ಶಾಪಿಂಗ್ ಮಾಲ್ ಎದುರು ದಾಳಿ:** ‘ಮಧ್ಯಾಹ್ನ 1.30ರ ಸುಮಾರಿಗೆ ಮಂಜ ಯುವತಿಯೊಬ್ಬರ ಜೊತೆಯಲ್ಲಿ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಹೊರಟಿದ್ದ. ಮೂವರು ದುಷ್ಕರ್ಮಿಗಳು ದ್ವಿಚಕ್ರ ವಾಹನದಲ್ಲಿ ಆತನನ್ನು ಹಿಂಬಾಲಿಸಿ ಫಿನಿಕ್ಸ್ ಮಾಲ್ ಎದುರು ದಾಳಿ ಮಾಡಿದ್ದರು. ಈ ಬಗ್ಗೆ ಪ್ರತ್ಯಕ್ಷದರ್ಶಿಯೊಬ್ಬರು ಹೇಳಿಕೆ ನೀಡಿದ್ದಾರೆ’ ಎಂದು ತಿಳಿಸಿದರು.

‘ನಡುರಸ್ತೆಯಲ್ಲೇ ಮಂಜನನ್ನು ಅಟ್ಟಾಡಿಸಿದ್ದ ಆರೋಪಿಗಳು ಕೈ ಹಾಗೂ ತಲೆಗೆ ಹೊಡೆದು ಪರಾರಿಯಾಗಿದ್ದಾರೆ. ತೀವ್ರ ರಕ್ತಸ್ರಾವದಿಂದ ಮಂಜ ಸ್ಥಳದಲ್ಲೇ ಮೃತಪಟ್ಟಿದ್ದಾನೆ.’

‘ಮಂಜನ ಮುಖ ಗುರುತು ಸಿಗದಷ್ಟು ವಿಕಾರವಾಗಿತ್ತು. ಹತ್ಯೆ ಬಳಿಕ, ಮೃತದೇಹದ ಮೇಲೆಯೇ ಆರೋಪಿಗಳು ಲಾಂಗ್ ಇಟ್ಟು ಹೋಗಿದ್ದಾರೆ’ ಎಂದು ಪೊಲೀಸರು ಹೇಳಿದರು.

### ಕಾರಹಳ್ಳಿ ಗ್ರಾಮದಲ್ಲಿ ನಡೆದ ಸಭೆಯಲ್ಲಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಭಾಗಿ

# ಸಮಸ್ಯೆಗಳ ನಿವಾರಣೆಗೆ ಪ್ರಯತ್ನ: ಶಾಸಕ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಸ್ಥಳೀಯ ಸಮಸ್ಯೆಗಳ ನಿವಾರಣೆಗೆ ಗ್ರಾಮ ಸಭೆಯನ್ನು ವಾರ್ಷಿಕ ಎರಡು ಬಾರಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಟಿ.ಮುರುಡಯ್ಯ ಹೇಳಿದರು.

ಇಲ್ಲಿನ ಕಾರಹಳ್ಳಿ ಗ್ರಾಮದಲ್ಲಿ ನಡೆದ 2019–20ನೇ ಸಾಲಿನ ಮೊದಲ ಹಂತದ ಗ್ರಾಮ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮ ಸಭೆಗಳು ಪಂಚಾಯಿತಿ ಅಸ್ತಿತ್ವಕ್ಕೆ ಬಂದಾಗಿನಿಂದ ನಡೆಯುತ್ತಲೇ ಇವೆ. ಸರ್ಕಾರ ಮೊದಲ ಬಾರಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಿಂಗಳಿಗೊಮ್ಮೆ ವಿವಿಧ ಅಧಿಕಾರಿಗಳೊಂದಿಗೆ ಪಂಚಾಯಿತಿ ಪ್ರಗತಿ ಪರಿಶೀಲನಾ ಸಭೆ ನಡೆಸಲು ಆದೇಶ ನೀಡಿರುವುದರಿಂದ ಪ್ರತಿಯೊಂದು ಇಲಾಖೆ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಸಮಸ್ಯೆಗಳ ಬಗ್ಗೆ ಎಚ್ಚರಿಕೆ ವಹಿಸಿ ಸೂಕ್ತ ಕ್ರಮಕೈಗೊಳ್ಳಬೇಕು ಎಂದರು.

ಕಾರಹಳ್ಳಿ ಗ್ರಾಮ ಪಂಚಾಯಿತಿ ಸತತ 2 ಬಾರಿ ರಾಜ್ಯಮಟ್ಟದ ಗಾಂಧಿ ಪುರಸ್ಕಾರ, ₹5ಲಕ್ಷ ಬಹುಮಾನ ಪಡೆದು ಮಾದರಿಯಾಗಿದೆ ಎಂದು ಹೇಳಿದರು.



ದೀಪ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು

ಶಾಸಕ ನಿಸರ್ಗ ನಾರಾಯಣಸ್ವಾಮಿ ಮಾತನಾಡಿ, ಅಧಿಕಾರಿಗಳು ರೈತರ ಮನೆಗಳಿಗೆ ತೆರಳಿ ಯೋಜನೆಗಳ ಬಗ್ಗೆ ಎಷ್ಟು ಮಾಹಿತಿ ನೀಡಿದ್ದೀರಿ ಎಂದು ಪ್ರಶ್ನಿಸಿದರು. ಕಾರಹಳ್ಳಿ ಪಂಚಾಯಿತಿ ಎಲ್ಲ ರೀತಿಯ ಯೋಜನೆಗಳನ್ನು ಅರ್ಹರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ಪ್ರಸ್ತುತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಮುಕ್ತವನ್ನಾಗಿಸಲು ಪ್ರತಿ ಕುಟುಂಬಗಳಿಗೆ ಹತ್ತಿಬಟ್ಟೆ ಕೈಚೀಲ ನೀಡುತ್ತಿದೆ ಎಂದು ಹೇಳಿದರು.

ಕಾರಹಳ್ಳಿ ಗ್ರಾಮದಲ್ಲಿ ಈಗಾಗಲೇ ವಿವಿಧ ಅಭಿವೃದ್ಧಿ ಕಾಮಗಾರಿ ನಡೆಸಲಾಗಿದ್ದು ₹6.5ಕೋಟಿ ಅನುದಾನ ನೀಡಲಾಗಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ದೇವರಾಜ್ ಮಾತನಾಡಿ, 2018–19ನೇ ಸಾಲಿನಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ₹15ಕೋಟಿ 47ಸಾವಿರ ಕಂದಾಯ ವಸೂಲಿಯಾಗಿದೆ. ವರ್ಗ-2ರಡಿಯಲ್ಲಿ ಒಟ್ಟು 55 ಕಾಮಗಾರಿಗೆ ₹6,06,61,508 ವೆಚ್ಚ ಮಾಡಲಾಗಿದೆ. 14ನೇ ಹಣಕಾಸು ಯೋಜನೆಯಡಿಯಲ್ಲಿ 18 ಕಾಮಗಾರಿ ನಡೆಸಲಾಗಿದ್ದು ₹12,01,783 ವೆಚ್ಚ ಮಾಡಲಾಗಿದೆ ಎಂದು ಹೇಳಿದರು.

ಪಂಚಾಯಿತಿ ವ್ಯಾಪ್ತಿಯಲ್ಲಿ ಉರುವಲು ಮುಕ್ತ ಮಾಡಲಾಗಿದೆ. ಹಸೀಕರಣ, ಬಯಲು ಶೌಚ ಮುಕ್ತವನ್ನಾಗಿಸಲಾಗಿದ್ದು ಪ್ಲಾಸ್ಟಿಕ್ ಮುಕ್ತ ಮಾಡಲು ಸಂಕಲ್ಪ ಮಾಡಲಾಗಿದೆ ಎಂದರು.

ಜೆಡಿಎಸ್ ತಾಲ್ಲೂಕು ಘಟಕ ಕಾರ್ಯಾಧ್ಯಕ್ಷ ಆರ್.ಮುನೇಗೌಡ ಮಾತನಾಡಿದರು. ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಚೈತ್ರಾ, ತಾಲ್ಲೂಕು ಪಂಚಾಯಿತಿ ಸದಸ್ಯರಾದ ಕಾರಹಳ್ಳಿ ಶ್ರೀನಿವಾಸ್, ಶೈಲಾ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಅನಂದಮ್ಮ, ಸದಸ್ಯರಾದ ಸಿ.ರಾಜೇಂದ್ರ, ಪ್ರಭಾವತಿ, ರೂಪ, ಗೋಪಾಲಗೌಡ, ಅಂಬಿಕಾ, ವಿಜಯಮ್ಮ, ರಾಜಣ್ಣ, ಇಂದಿರಮ್ಮ, ನಾರಾಯಣಸ್ವಾಮಿ, ನರಸಿಂಹಯ್ಯ ,ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕವಿತಾ, ಕಾರ್ಯದರ್ಶಿ ರಾಜೇಶ್ ಇದ್ದರು.

# ಪ್ರತಿಭೆ ಅನಾವರಣಕ್ಕೆ ‘ಚಿಗುರು’ ಸಹಕಾರಿ

ಪ್ರಜಾವಾಣಿ ವಾರ್ತೆ

**ವಿಜಯಪುರ:** ‘ಮಗುವಿನಲ್ಲಿರುವ ಕಲಾ ಪ್ರತಿಭೆಯನ್ನು ಹೊರಗೆ ತರಲಿಕ್ಕೆ ವೇದಿಕೆಯನ್ನು ಕಲ್ಪಿಸಿದಾಗ ಅವರಲ್ಲಿನ ಕಲೆಯನ್ನು ಅನಾವರಣಗೊಳಿಸಿ ಪರಿಪಕ್ವ ವಿದ್ಯಾರ್ಥಿಯನ್ನಾಗಿ ರೂಪಿಸಲು ಸಾಧ್ಯ’ ಎಂದು ಶಾಸಕ ನಿಸರ್ಗ ನಾರಾಯಣಸ್ವಾಮಿ ಹೇಳಿದರು.

ಚನ್ನರಾಯಪಟ್ಟಣ ಮಹಾತ್ಮಾ ಗಾಂಧಿ ಪ್ರೌಢಶಾಲೆಯ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪರಿವರ್ತನಾ ಕಲಾ ಸಂಸ್ಥೆ ಪಾಪನಹಳ್ಳಿಯ ಸಹಯೋಗದಲ್ಲಿ ಆಯೋಜಿಸಿದ್ದ ಚಿಗುರು-2019 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಮಾಹಿತಿ ತಂತ್ರಜ್ಞಾನ ಬೆಳೆಯುತ್ತಿರುವಂತೆಲ್ಲಾ ಜಾನಪದ ಸೊಗಡು, ಕಲೆ, ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿಯು ಅಳಿವಿನಂಚಿಗೆ ಸಾಗುತ್ತಿರುವುದು ಆತಂಕದ ವಿಚಾರ. ವಿಜ್ಞಾನ ಮತ್ತು ತಂತ್ರಜ್ಞಾನದಿಂದ ನಮ್ಮ ಸಂಸ್ಕೃತಿ ಉಳಿಸಲು ಸಾಧ್ಯವಾಗುವುದಿಲ್ಲ. ಪ್ರತಿಭಾ ಕಾರಂಜಿಯ ಮಾದರಿಯಲ್ಲಿ ಚಿಗುರು ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಹೊರಗೆ ತರಲು ವೇದಿಕೆ ನಿರ್ಮಾಣ ಮಾಡಿಕೊಟ್ಟಾಗ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧ್ಯ’ ಎಂದರು.

ಜಿಲ್ಲಾ ಪಂಚಾಯಿತಿ ಸದಸ್ಯ ಲಕ್ಷ್ಮೀನಾರಾಯಣಪ್ಪ ಮಾತನಾಡಿ, ‘ಗ್ರಾಮಾಂತರ ಪ್ರದೇಶಗಳಿಂದ ಜಾನಪದ ಸೊಗಡು ಇಂದಿಗೂ ಉಳಿದುಕೊಂಡಿದೆ. ಮಕ್ಕಳಲ್ಲಿನ ಪ್ರತಿಭೆಗಳು ಹೊರಹೊಮ್ಮಲು ವೇದಿಕೆ ಕಾರ್ಯಕ್ರಮಗಳ ಅವಶ್ಯಕತೆ ಇದೆ. ಭಾವ, ತಾಳ, ಮೇಳ, ಮಾಧುರ್ಯಗಳೆಲ್ಲವೂ ಉತ್ತಮ ಸಂಗೀತದ ತಳಹದಿಗಳಾಗಿವೆ. ಸಂಗೀತವು, ಮನಸ್ಸಿನೊಳಗೆ ನಡೆಯುವ ನೈಸರ್ಗಿಕ ಕ್ರಿಯೆಯಾಗಿದೆ. ಸಂಗೀತದ ಜ್ಞಾನವಿಲ್ಲದೆ ಇರುವವರು ಮನಸ್ಸಿನೊಳಗೆ ಸಂಗೀತ ನುಡಿಸಬಲ್ಲರು’ ಎಂದರು.



ಚಿಗುರು2019 ಕಾರ್ಯಕ್ರಮದಲ್ಲಿ ಕ್ರೀಡಾಕೂಟಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು

ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಂಜುನಾಥ ಆರಾಧ್ಯ ಮಾತನಾಡಿ, ನಾಡಿನ ಸಾಂಸ್ಕೃತಿಕ ಪರಂಪರೆ ಮತ್ತು ಹಿರಿಮೆಯನ್ನು ಮಕ್ಕಳಿಗೆ ಪರಿಚಯಿಸುವುದು ಅನಿವಾರ್ಯ. ನಾಡಿನ ಸಂಸ್ಕೃತಿ ಬಿಂಬಿಸುವ ಕಾರ್ಯಕ್ರಮ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿರದೆ ಎಲ್ಲ ಜನರೂ ತಮ್ಮ ಪ್ರದೇಶದಲ್ಲಿ ನೋಡಿ ಸಂಭ್ರಮಿಸುವಂತೆ ಮಾಡಬೇಕು. ಮಕ್ಕಳಲ್ಲಿ ಸಾಮಾಜಿಕ ಪ್ರಜ್ಞೆ ಹೆಚ್ಚಿಸುವಲ್ಲಿ ತಾಯಿಯ ಪಾತ್ರ ಬಹುಮುಖ್ಯ. ಹಳ್ಳಿಯ ಮಕ್ಕಳಲ್ಲಿ ಹಾಡುಗಾರಿಕೆಗೆ ಹೇಳಿ ಮಾಡಿಸಿದ ಕಂಠ ಇರುತ್ತದೆ. ಆದರೆ, ಅವಶ್ಯಕ ತರಬೇತಿ, ಸೂಕ್ತ ವೇದಿಕೆಯ ಕೊರತೆಯಿಂದ ಪ್ರತಿಭೆ ತನ್ನಲ್ಲಿಯೇ ಹುದುಗಿ ಹೋಗುತ್ತದೆ. ಕೆಲವರು ಪಟ್ಟಣಕ್ಕೆ ತೆರಳಿ ಸಮರ್ಪಕ ತರಬೇತಿ ಪಡೆದು ಸಾಧನೆ ಮಾಡಿದವರೂ ಇದ್ದಾರೆ. ಆದರೂ ದೈವದತ್ತವಾಗಿ ಬಂದ ಕಂಠ ಮಾಧುರ್ಯವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಿ ಎಂದರು.

ಕರ್ನಾಟಕ ವಾದ್ಯ ಸಂಗೀತ, ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಜನಪದ ಗೀತೆಗಳು, ಸಮೂಹ ನೃತ್ಯ, ಭರತನಾಟ್ಯ, ಯಕ್ಷಗಾನ, ಏಕಪಾತ್ರಾಭಿನಯ ನಡೆದವು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಬಿ.ವಿ.ಮಂಜುಳಮ್ಮ ಮಂಜುನಾಥ್, ತಾಲ್ಲೂಕು ಪಂಚಾಯಿತಿ ಸಾಮಾಜಿಕ ನ್ಯಾಯಸಮಿತಿ ಅಧ್ಯಕ್ಷ ಮುನೇಗೌಡ, ಸದಸ್ಯ ದಿನ್ನೂರು ವೆಂಕಟೇಶ್, ಮುಖ್ಯಶಿಕ್ಷಕ ಅಶೋಕ್‌ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯ ನಾರಾಯಣಸ್ವಾಮಿ, ಮುಖಂಡ ದೊಡ್ಡೇಗೌಡ, ಸಿ.ಎನ್. ಜಯರಾಮೇಗೌಡ, ಪರಿವರ್ತನಾ ಕಲಾ ಸಂಸ್ಥೆಯ ಪಾಪನಹಳ್ಳಿ ಮೂರ್ತಿ ಇದ್ದರು.

ಭಾನುವಾರದ ಪುರವಣಿ ಓದಿರಿ

SOBHA
PASSION AT WORK

**SOBHA LIMITED**
CIN: L45201KA1995PLC018475
Registered & Corporate Office: ‘SOBHA’, Sarjapur – Marathahalli Outer Ring Road (ORR), Devarabisanahalli, Bellandur Post
**BANGALORE - 560 103**
Phone: 080-4932 0000

**NOTICE**

Notice is hereby given pursuant to Regulation 29 and 47 of the SEBI (Listing Obligations and Disclosure Requirements) Regulations, 2015 that, a meeting of the Board of Directors of the Company is scheduled on Friday, the 8th day of November, 2019 at its Registered and Corporate Office situated at ‘SOBHA’, Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103, to consider and take on record, inter-alia, the unaudited financial results of the Company for the quarter and half year ended September 30, 2019.

Further details may be accessed from the website of the Company www.sobha.com or the website of Stock Exchanges where the securities of the Company are listed viz. www.nseindia.com or www.bseindia.com.

**For Sobha Limited**
Vigneshwar G Bhat
Company Secretary and Compliance Officer

Place: Bangalore
Date : October 25, 2019

*“All the Investor Queries / Complaints / Grievances may be addressed to investors@sobha.com.”*

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೋಲಾರ ವಿಭಾಗ,
ಕೋಲಾರ–563101.
ದೂರವಾಣಿ: 08152–222022 ಫ್ಯಾಕ್ಸ್: 08152–227443
ಇ–ಮೇಲ್: eeklr@kpwd.gov.in ವೆಬ್‌ಸೈಟ್: www.kpwd.gov.in

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –1: 3
ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ ಸಂಖ್ಯೆ: 14–3/2019–20
ದಿನಾಂಕ : 22.10.2019
ಉಲ್ಲೇಖ: (1) ಟೆಂಡರ್ ಅಧಿಸೂಚನೆ ಸಂಖ್ಯೆ: 14/2019–20
ದಿನಾಂಕ : 10.06.2019
(2) ಅಲ್ಪಾವಧಿ ಟೆಂಡರ್ ತಿದ್ದುಪಡಿ/ ಮುಂದೂಡಿಕಾ ಅಧಿಸೂಚನೆ ಸಂಖ್ಯೆ : 14–1/2019–20 ದಿನಾಂಕ : 15.7.2019
(3) ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ ಸಂಖ್ಯೆ: 14–2/2019–20
ದಿನಾಂಕ: 14.10.2019

ಕೋಲಾರ ಲೋಕೋಪಯೋಗಿ ಇಲಾಖೆ ಕೋಲಾರ ಉಪ ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ 5054 ಎಸ್.ಸಿ.ಪಿ., ಅಡಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: ಕನಿಷ್ಠ ರೂ.10.00 ಲಕ್ಷಗಳು ಗರಿಷ್ಠ ರೂ.65.00 ಲಕ್ಷಗಳು ಇ.ಎಂ.ಡಿ ಮೊತ್ತ ಕನಿಷ್ಠ: ರೂ. 12500/- ಗರಿಷ್ಠ ರೂ.1,30,000/- ಕಾಲಾವಧಿ: 2–4ತಿಂಗಳು ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ- ಪ್ರಕ್ಯೂರ್‌ಮೆಂಟ್ ಅನ್ವಯ ಪ್ಯಾಕೇಜ್ ಹಾಗೂ ಏಕ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು– 1 : 3 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 04.11.2019 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 05.11.2019 ರಂದು ಸಂಜೆ 16.30 ಗಂಟೆಯ ನಂತರ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc. karnataka.gov.in) ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನಿಯರ್,
ಲೋ.ಬಂ. ಮತ್ತು ಒ.ಜ.ಸಾ.ಇ, ವಿಭಾಗ ಕೋಲಾರ.
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 271/ಎಂಸಿಎ/2019–20

ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ : ನಂ.14, ಸೌತ್ ಎಂಡ್ ರಸ್ತೆ
ಶೇಷಾದ್ರಿಪುರಂ, ಬೆಂಗಳೂರು –560 020. ದೂ.ಸಂ. : 23562229

ಸದಸ್ಯರ ಹಾಗೂ ಗ್ರಾಹಕರ ಅವಗಾಹನೆಗೆ

ನಮ್ಮ ಬ್ಯಾಂಕಿನ ರಾಜರಾಜೇಶ್ವರಿನಗರ ಶಾಖೆಯು ಡಿ.ಇ.ಎಂ.ಎಲ್ ಲೇ-ಔಟ್‌ನಿಂದ ನಂ.34/4, ಮೊದಲನೇ ಮಹಡಿ, ಚೆನ್ನಸಂದ್ರ, ಉತ್ತರಹಳ್ಳಿ ಹೋಬಳಿ, ಆರ್.ಎನ್.ಎಸ್. ಐ.ಟಿ. ಕಾಲೇಜ್ ಹತ್ತಿರ, ರಾಜರಾಜೇಶ್ವರಿನಗರ, ಬೆಂಗಳೂರು–560098 ಈ ವಿಳಾಸಕ್ಕೆ ಸ್ಥಳಾಂತರಗೊಂಡು ದಿನಾಂಕ 02.11.2019 ರಿಂದ ಕಾರ್ಯ ನಿರ್ವಹಿಸುತ್ತದೆ. ಸದಸ್ಯರು ಮತ್ತು ಗ್ರಾಹಕರು ವ್ಯವಹಾರಗಳನ್ನು ಹೊಸ ವಿಳಾಸದಲ್ಲಿ ಮುಂದುವರಿಸಲು ವಿನಂತಿಸಿಕೊಳ್ಳಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 26.10.2019
ಇತಿ
ಆಡಳಿತ ಮಂಡಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಗಳು, ಬೆಂಗಳೂರು
ಸಂ.: ಬಿ12(4ಎ)ಪಿಆರ್/ಇ–1167/2019–20 ದಿನಾಂಕ : 24.10.2019

**ಪ್ರಕಟಣೆ**

ಡಾ॥ ಮಾನಸ, ಸ್ತ್ರೀರೋಗ ತಜ್ಞರು, ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಕಛೇರಿಯಲ್ಲಿ ವೇತನ ಪಡೆದು, ಓಓಡಿ ಮೇಲೆ ಆಸ್ಟಿನ್‌ಟೌನ್ ಹೆರಿಗೆ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೀವು ಸಮುಚ್ಚಿತ ಮಾರ್ಗದಲ್ಲಿ ರಜಾ ಸಲ್ಲಿಸಿ, ರಜೆ ಮಂಜೂರಾತಿಯನ್ನು ಪಡೆಯದೇ ಹಾಗೂ ಮೇಲಾಧಿಕಾರಿಗಳ ಅನುಮತಿಯನ್ನು ಪಡೆಯದೆ ದಿನಾಂಕ : **09.02.2019** ರಿಂದ ಈ ತಹಲ್‌ವರೆವಿಗೂ ಅನಧಿಕೃತ ಗೈರು ಹಾಜರಾಗಿ ಸಾರ್ವಜನಿಕರ ಹಾಗೂ ಆಸ್ಪತ್ರೆ ಕೆಲಸಕಾರ್ಯಗಳಿಗೆ ತೀವ್ರತರವಾದ ಅಡಚಣೆ ಉಂಟುಮಾಡಿ, 1966ರ ಸರ್ಕಾರಿ ನೌಕರ (ನಡತೆ) ನಿಯಮಾವಳಿ ನಿಯಮ 3(iii)ನ್ನು ಉಲ್ಲಂಘಿಸಿ ಕರ್ತವ್ಯಲೋಪವನ್ನು ಎಸಗಿರುವುದರಿಂದ ಏಕೆ ನಿಮ್ಮ ಮೇಲೆ ಶಿಸ್ತಿನ ಕ್ರಮ ಜರುಗಿಸಬಾರದೆಂಬುದಕ್ಕೆ ದಿನಾಂಕ : **09.07.2019**ರಂದು ಕಾರಣ ಕೇಳಿ ಪತ್ರವನ್ನು ಹೊರಡಿಸಿ, ಸದರಿ ಕಾರಣ ಕೇಳಿ ಪತ್ರವನ್ನು ನಿಮ್ಮ ವಿಳಾಸಕ್ಕೆ ನೋಂದಾಯಿಸಿದ ಅಂಚೆ ಮುಖಾಂತರ ರವಾನಿಸಲಾಗಿದ್ದು, ಸದರಿ ವಿಳಾಸದಲ್ಲಿ ಸ್ವೀಕೃತಿಯಾಗದೇ ವಾಪಸ್ಸು ಬಂದಿರುತ್ತದೆ.

ಆದ್ದರಿಂದ ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 15 ದಿನಗಳೊಳಗಾಗಿ ಉಪ ಆಯುಕ್ತರು (ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಬಳಿ ಖುದ್ದು ಹಾಜರಾಗಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಕೆ.ಸಿ.ಎಸ್. ಆರ್. ನಿಯಮ 108ರಂತೆ ಪಾಲಿಕೆ ಸೇವೆಯಿಂದ ವಜಾಗೊಳಿಸಲಾಗುವುದು.

ಮಾನ್ಯ ಅಪರ ಆಯುಕ್ತರು (ಆಡಳಿತ)ರವರ ಆದೇಶದಂತೆ.

ಸಹಿ/– ಉಪ ಆಯುಕ್ತರು (ಆಡಳಿತ), ಬಿಬಿಎಂಪಿ

“ಸುಧಾರಣಾ ವೆಚ್ಚ ಪಾವತಿಸಿ, ಬೆಂಗಳೂರಿನ ಅಭಿವೃದ್ಧಿಗೆ ಸಹಕರಿಸಿ”

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್)ರವರ ಕಛೇರಿ, ಬಿಬಿಎಂಪಿ ಕೇಂದ್ರ ಕಛೇರಿ,
2ನೇ ಮಹಡಿ, ಅನೆಕ್ಸ್–2 ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು–02
ನಂ.: ಬಿಬಿಎಂಪಿ/2019–20/ಟೆಂಡರ್–05/ಮುಆಅ(ಕ್ಲಿನಿಕಲ್) ದಿನಾಂಕ: 25.10.2019

**ಟೆಂಡರ್ ಪ್ರಕಟಣೆ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು **ಬಿಬಿಎಂಪಿ ಮೆಟರ್ನಿಟಿ ಹೋಮ್ಸ್ / ರೆಫರಲ್ ಆಸ್ಪತ್ರೆಗಳಲ್ಲಿ ಹೊಸ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ (ಪಿಎಂಬಿಜೆಕೆ) ನಿರ್ಮಿಸಲು ಮತ್ತು ಕಾರ್ಯಾಚರಿಸಲು** ಆಸಕ್ತ ಎನ್‌ಜಿಒ / ಫರ್ಮ್ / ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

**ಬಿಡ್ ಪ್ರಕ್ರಿಯೆಗಳು : (1)** ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc. karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : **24.10.2019** ರಿಂದ. **(2)** ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ : ಆರೋಗ್ಯಾಧಿಕಾರಿ (ಪಶ್ಚಿಮ–ಕ್ಲಿನಿಕಲ್)ರವರ ಕಛೇರಿ, 2ನೇ ಮಹಡಿ, ದಾಸಪ್ಪ ಆಸ್ಪತ್ರೆ ಆವರಣ, ಬೆಂಗಳೂರು–560002ರಲ್ಲಿ **31.10.2019, ಬೆಳಿಗ್ಗೆ 11:00ಗಂಟೆಗೆ. (3)** ಇ–ಪ್ರೊಕ್ಯರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **31.10.2019, ಸಂಜೆ 5:00 ಗಂಟೆವರೆಗೆ. (4)** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **25.11.2019**ರ **ಸಂಜೆ 5:00 ಗಂಟೆವರೆಗೆ. (5)** ಅರ್ಜಿಗಳನ್ನು ಆನ್‌ಲೈನ್ ತೆರೆಯುವ ದಿನಾಂಕ ಮತ್ತು ಸಮಯ : **27.11.2019**ರ **ಸಂಜೆ 5:00 ಗಂಟೆಗೆ. (6) ಅರ್ಜಿಗಳನ್ನು ತೆರೆಯುವ ಸ್ಥಳ :** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ. **(7) ಸಂಪರ್ಕಿಸಬೇಕಾದ ವಿಳಾಸ :** ಆರೋಗ್ಯಾಧಿಕಾರಿ (ಪಶ್ಚಿಮ–ಕ್ಲಿನಿಕಲ್)ರವರ ಕಛೇರಿ, 2ನೇ ಮಹಡಿ, ದಾಸಪ್ಪ ಆಸ್ಪತ್ರೆ ಆವರಣ, ಬೆಂಗಳೂರು–560002 ದೂ.: 080–22975656, ಇಮೇಲ್ : tenderhealthclinicalbbmp@gmail.com. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc. karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್), ಬಿಬಿಎಂಪಿ

“ಸುಧಾರಣಾ ವೆಚ್ಚ ಪಾವತಿಸಿ, ಬೆಂಗಳೂರಿನ ಅಭಿವೃದ್ಧಿಗೆ ಸಹಕರಿಸಿ”